**<u>ಸಿವಿಲ್ ನ್ಯಾಯಾಧೀಶರು ಮತ್ತು  ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಜೇವರ್ಗಿ.</u>**

**<u>ಸಿ.ಸಿ.ನಂ.36/2021</u>**

ಸರಕಾರದ ಪರವಾಗಿಃ ಅಬಕಾರಿ ನಿರೀಕ್ಷಕರು, ಜೇವರ್ಗಿ

-:ವಿರುದ್ದ:-

ಆರೋಪಿ/ತರುಃ-   ಜುಮ್ಮಣ್ಣ ತಂದೆ ದ್ಯಾವಪ್ಪ ಪೂಜಾರಿ
ವಃ 36 ವರ್ಷ, ಉಃ
ಸಾಃ ಸಾಥಖೇಡ, ತಾಃ ಜೇವರ್ಗಿ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ  313 ರ ಪ್ರಕಾರ ಆರೋಪಿತರ  ಹೇಳಿಕೆಗಳು</u>**

ಪ್ರಃ1:  ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ    ಆ-

ಪ್ರಃ 2  ಚಾಸಾ-2/ಪ್ರಾಸಾ-1 ಜಾನುಮಿಯಾ ಅಬಕಾರಿ ಪೆದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 18-04-2020 ರಂದು ಬೆಳಗಿನ ಜಾವ 03-20 ಗಂಟೆಗೆ ಚಾಸಾ-1 ಅವರು ತನಗೆ ಕರೆ ಮಾಡಿ ಖಚಿತ ಬಾತ್ಮಿ ಇರುವುದರಿಂದ ತುರ್ತಾಗಿ ಕಚೇರಿಗೆ ಬರುವಂತೆ ತಿಳಿಸಿದ್ದು ಅದರಂತೆ ತಾನು ಕಚೇರಿಗೆ ಬಂದಾಗ ಚಾಸಾ-1 ಅವರು ತನಗೆ ಹಾಗೂ ಚಾಸಾ-3 ಅವರನ್ನು ಕರೆದು ಒಂದು ಖಚಿತ ಬಾತ್ಮಿ ಇದ್ದು ದಾಳಿಯ ಸಮಯದಲ್ಲಿ ಅಬಕಾರಿ ಅಕ್ರಮ ಕಂಡು ಬಂದಲ್ಲಿ ಪಂಚರು ಸಿಗದೆ ಇದ್ದರೆ ನೀವೆ ಪಂಚರಾಗಬೇಕೆಂದು ತಿಳಿಸಿದ್ದು, ಅದರಂತೆ ಎಲ್ಲರೂ ಸರಕಾರಿ ಜೀಪನಲ್ಲಿ ಜೇವರ್ಗಿ ಪಟ್ಟಣದಿಂದ ಸೊನ್ನ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಎನಹೆಚ್ -50 ರಸ್ತೆಯ ಜವಳಗಾ ಕ್ರಾಸ ಹತ್ತಿರ ರಸ್ತೆಯ ಗಸ್ತು ಮಾಡುತ್ತಿದ್ದಾಗ ಒಂದು ನಾಲ್ಕು ಚಕ್ರದ ವಾಹನ ಸೊನ್ನ ಕಡೆಯಿಂದ ಬರುತ್ತಿತ್ತು, ಆಗ ನಮ್ಮ ಅಧಿಕಾರಿಗಳು ಸದರಿ ವಾಹನವನ್ನು ತಡೆಯಲು ಸೂಚಿಸಿದರು, ಸದರಿ ವಾಹನದ ಚಾಲಕನು ನಮ್ಮನ್ನು ಸಮವಸ್ತ್ರದಲ್ಲಿರುವುದನ್ನು ನೋಡಿ ವಾಹನವನ್ನು ವೇಗವಾಗಿ ಚಲಾಯಿಕೊಂಡು

ಹೋದನು, ನಂತರ ನಾವು ನಮ್ಮ ವಾಹನದಲ್ಲಿ ಬೆನ್ನತ್ತಿ ಹೋದಾಗ ಸದರಿ ವಾಹನದ ಚಾಲಕನು ಸ್ವಲ್ಪ ದೂರ ಹೋಗಿ ವಾಹನ್ನು ಬಿಟ್ಟು ಓಡಿ ಹೋದನು, ನಂತರ ಸ್ಥಳದಲ್ಲಿ ವಾರಂಟನ್ನು ತಯಾರಿಸಿ ಸದರಿ ವಾಹನವನ್ನು ಪರಿಶೀಲನೆ ಮಾಡಲಾಗಿ ಅದು ನಿಲಿ ಬಣ್ಣದ ಕ್ರೂಜರ ಆಗಿತ್ತು, ಸದರಿ ವಾಹನದಲ್ಲಿ 27 ರಟ್ಟಿನ ಪಟ್ಟಿಗೆಗಳು ಇದ್ದವು ಅವುಗಳನುನ ಪರಿಶೀಲಿಸಲಾಗಿ 180 ಎಂ ಎಲ್ ನ 17 ಓರಿಜನಲ ಚಾಯ್ಸ ವಿಸಕಿಯ ಬಾಕ್ಸಗಳಿದ್ದವು, 180 ಎಂ ಎಲ್ ನ ಬ್ಯಾಗಪೈಪರ ವಿಸಕಿಯ 10 ಬಾಕ್ಸಗಳಿದ್ದವು, ನಂತರ ಸದರಿ ಮುದ್ದೆ ಮಾಲಿನಿಂದ ತಲಾ ಎರಡೆರಡು ಬಾಲಿಗಳಂತೆ ಓರಿಜನಲ ಚಾಯ್ಸ ವಿಸಕಿಯ 34 ಬಾಟಲಿಗಳು ಬ್ಯಾಗಪೈಪರ ವಿಸಕಿಯ 20 ಬಾಟಲಿಗಳು ತೆಗೆದುಕೊಂಡು ಸದರಿ ಬಾಟಲಿಗಳಿಗೆ ಚೀಟಿಯನ್ನು ಅಂಟಿಸಿ ಇಲಾಖೆಯ ಮುದ್ರೆಯನ್ನು ಹಾಕಲಾಯಿತು, ನಂತರ ಮುದ್ದೆ ಮಾಲು ಹಾಗೂ ಪಂಚನಾಮೆಯೊಂದಿಗೆ ಕಚೇರಿಗೆ ಬಂದು ಪ್ರಕರಣವನ್ನು ದಾಖಲಿಸಲಾಯಿತು, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ 3 ಚಾಸಾ-5/ಪ್ರಾಸಾ-2 ಜಾನುಮಿಯಾ ಅಬಕಾರಿ ಪೆದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಈ ಪ್ರಕರಣದ ಆರೋಪಿ ಪತ್ತೆ ಕರಿತು ಚಾಸಾ-7 ಅವರ ಆದೇಶದಂತೆ ದಿನಾಂಕ 24-07-2020 ರಂದು ಸಾತಖೇಡ ಗ್ರಾಮಕ್ಕೆ ಭೆಟ್ಟಿ ನೀಡಿ ವಾಹನದ ಮಾಲೀಕರಾದ ಜುಮ್ಮಣ್ಣ ತಂದೆ ದ್ಯಾವಪ್ಪ ಅವರ ಬಗ್ಗೆ ವಿಚಾರಿಸಲಾಗಿ ಅವರು ಗ್ರಾಮದಲ್ಲಿ ಇರಲಿಲ್ಲ, ದಿನಾಂಕ 14-08-2020 ರಂದು ಪುನಃ ಸದರಿ ಗ್ರಾಮಕ್ಕೆ ಭೆಟ್ಟಿ ನೀಡಿ ಆತನು ಊರಿನಲ್ಲಿ ಇರಲಿಲ್ಲ, ಆ ಬಗ್ಗೆ ಚಾಸಾ-7 ಅವರಿಗೆ ಮಾಹಿತಿಯನ್ನು ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ 4 ಚಾಸಾ-4/ಪ್ರಾಸಾ-3 ಗೊಲ್ಲಾಳಪ್ಪ ಅಬಕಾರಿ ಪೆದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 24-07-2020 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ

ಓರಿಜನಲ ಚಾಯ್ಸ ವಿಸಕಿಯ 34 ಬಾಟಲಿಗಳು ಬ್ಯಾಗಪೈಪರ ವಿಸಕಿಯ 20 ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ರಾಯಚೂರ ಅವರಿಗೆ ನೀಡಿ ಸದರಿ ಅವರಿಂದ ರಸಾಯನಿಕ ವರದಿಯನ್ನು ಪಡೆದುಕೊಂಡು ಬಂದು ಚಾಸಾ-1 ಅ ವರಿಗೆ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ 5 ಚಾಸಾ-7/ಪ್ರಾಸಾ-4 ವನಿತಾ ಅಬಕಾರಿ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 19-04-2020 ರಂದು ಈ ಪ್ರಕರಣದ ಕಡತವನುನ ಚಾಸಾ-1 ಅವರಿಂದ ಪಡೆದುಕೊಂಡು ಸದರಿ ಪ್ರಕರಣದಲ್ಲಿ ಜಪ್ತಿಯಾದ ವಾಹನ ನಂ.ಕೆಎ-32/ಎ-8953 ಇದರ ಮಾಲಿಕತ್ವದ ವಿವರ ಹಾಗೂ ಅದರ ಮೌಲ್ಯಮಾಪನಕ್ಕಾಗಿ RTO Kalaburagi ಅವರಿಗೆ ಪತ್ರ ಬರೆದಿರುತ್ತೇನೆ, ಸದರಿ ವಾಹನದ ಮಾಲೀಕ ಆರೋಪಿ ಇರುತ್ತಾನೆ, ದಿನಾಂಕ 24-07-2020 ರಂದು ಪ್ರಕರಣಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ರಸಾಯನಿಕ ವರದಿಗಾಗಿ ಚಾಸಾ-4 ಅವರ ಮುಖಾಂತರ ಕಳುಹಿಸಿರುತ್ತೇನೆ, ದಿನಾಂಕ 25-07-2020 ರಂದು ರಸಾಯನಿಕ ವರದಿಯನ್ನು ಪಡೆದಿರುತ್ತೇನೆ, ದಿನಾಂಕ 25-07-2020 ರಂದು ಚಾಸಾ-4 ಅವರ ಹೇಳಿಕೆ ಪಡೆದಿರುತ್ತೇನೆ, ದಿನಾಂಕ 17-07-2020 ರಂದು ಚಾಸಾ-4 ಅವರ ಹೇಳಿಕೆ ಪಡೆದಿರುತ್ತೇನೆ, ದಿನಾಂಕ 17-07-2020 ರಂದು ಚಾಸಾ-5 ಅವರನ್ನು ಆರೋಪಿತನ ಪತ್ತೆ ಕುರಿತು ನೆಮಕ ಮಾಡಿರುತ್ತೇನೆ, ದಿನಾಂಕ 24-07-2020 ಮತ್ತು 14-08-2020 ರಂದು ಚಾಸಾ-5 ಅವ ರಿಂದ ಆರೋಪಿತನ ಪತ್ತೆ ಕುರಿತು ವರದಿಗಳನ್ನು ಪಡೆದಿರುತ್ತೇನೆ, ದಿನಾಂಕ 19-09-2020 ರಂದು ತನಿಖೆ ಮುಗಿಸಿ ಆರೋಪಿ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ 6 ಚಾಸಾ-1/ಪ್ರಾಸಾ-5 ನಿಂಗನಗೌಡ ಪಾಟೀಲ, ಅಬಕಾರಿ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 18-04-2020 ರಂದು ಬೆಳಗಿನ ಜಾವ

03-00 ಗಂಟೆಗೆ ಜೇವರ್ಗಿ ಪಟ್ಟಣದಲ್ಲಿ ಗಸ್ತು ಮಾಡಿ ಮನೆಗೆ ತೆರಳುತ್ತಿರುವಾಗ ತನ್ನ ಮೊಬಾಯಿಗೆ ಕರೆ ಬಂದಿದ್ದೇನೆಂದರೆ, ಸೊನ್ನ ಗ್ರಾಮದ ಹೈವೆ ಮೇಲೆ ಜುಮ್ಮಣ್ಣ ತಂದೆ ದ್ಯಾವಪ್ಪ ಪೂಜಾರಿ ಸಾಃ ಸಾಥಖೇಡ ಎನ್ನು ವ್ಯಕ್ತಿ ಒಂದು ನಾಲ್ಕು ಚಕ್ರದ ವಾಹನದ ಮೇಲೆ ಅಕ್ರಮ ಮದ್ಯ ಸಾಗಾಣಿ ಮಾಡುತ್ತಿದ್ದ ಬಗ್ಗೆ ಖಚಿತ ಬಾತ್ಮಿ ಮೆರೆಗೆ, ಸದರಿ ವಿಷಯವನ್ನು ಚಾಸಾ-2 ಮತ್ತು 3 ಅವರಿಗೆ ತಿಳಿಸಿ ಪಂಚರಾಗಬೇಕೆಂದು ತಿಳಿಸಿದ್ದು, ನಂತರ ಬೆಳಗಿನ ಜಾವ 3-20 ಗಂಟೆಗೆ ಜವಳಗಾ ಕ್ರಾಸ ಹತ್ತಿರ ರಸ್ತೆಯ ಗಸ್ತು ಮಾಡುತ್ತಿದ್ದಾಗ ಒಂದು ನಾಲ್ಕು ಚಕ್ರದ ವಾಹನ ಸೊನ್ನ ಕಡೆಯಿಂದ ಬರುತ್ತಿತ್ತು, ಆಗ ನಾವು ಸದರಿ ವಾಹನವನ್ನು ತಡೆಯಲು ಸೂಚಿಸಿದವೆ, ಸದರಿ ವಾಹನದ ಚಾಲಕನು ನಮ್ಮನ್ನು ಸಮವಸ್ತ್ರದಲ್ಲಿರುವುದನ್ನು ನೋಡಿ ವಾಹನವನ್ನು ವೇಗವಾಗಿ ಚಲಾಯಿಕೂಂಡು ಹೋದನು, ನಂತರ ನಾವು ನಮ್ಮ ವಾಹನದಲ್ಲಿ ಬೆನ್ನತ್ತಿ ಹೋದಾಗ ಸದರಿ ವಾಹನದ ಚಾಲಕನು ಸ್ವಲ್ಪ ದೂರ ಹೋಗಿ ವಾಹನ್ನು ಬಿಟ್ಟು ಓಡಿ ಹೋದನು, ನಂತರ ಸ್ಥಳದಲ್ಲಿ ಕಲಂ 54 ರಲ್ಲಿ ವಾರಂಟನ್ನು ತಯಾರಿಸಿ ಸದರಿ ವಾಹನವನ್ನು ಪರಿಶೀಲನೆ ಮಾಡಲಾಗಿ ಅದರ ಸಂ.ಕೆಎ-32/ಎ-8953 ಆಗಿತ್ತು, ಸದರಿ ವಾಹನದಲ್ಲಿ 27 ರಟ್ಟಿನ ಪಟ್ಟಿಗೆಗಳು ಇದ್ದವು ಅವುಗಳನುನ ಪರಿಶೀಲಿಸಲಾಗಿ 180 ಎಂ ಎಲ್ ನ 17 ಓರಿಜನಲ ಚಾಯ್ಸ ವಿಸಕಿಯ ಬಾಕ್ಸಗಳಿದ್ದವು, 180 ಎಂ ಎಲ್ ನ ಬ್ಯಾಗಪೈಪರ ವಿಸಕಿಯ 10 ಬಾಕ್ಸಗಳಿದ್ದವು, ನಂತರ ಸದರಿ ಮುದ್ದೆ ಮಾಲಿನಿಂದ ತಲಾ ಎರಡೆರಡು ಬಾಲಿಗಳಂತೆ ಓರಿಜನಲ ಚಾಯ್ಸ ವಿಸಕಿಯ 34 ಬಾಟಲಿಗಳು ಬ್ಯಾಗಪೈಪರ ವಿಸಕಿಯ 20 ಬಾಟಲಿಗಳು ತೆಗೆದುಕೊಂಡು ಸದರಿ ಬಾಟಲಿಗಳಿಗೆ ಚೀಟಿಯನ್ನು ಅಂಟಿಸಿ ಇಲಾಖೆಯ ಮುದ್ರೆಯನ್ನು ಹಾಕಲಾಯಿತು, ನಂತರ ಮುದ್ದೆ ಮಾಲು ಹಾಗೂ ಪಂಚನಾಮೆಯೊಂದಿಗೆ ಕಚೇರಿಗೆ ಬಂದು ಸರಕಾರಿ ತರ್ಪೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕಿ ಸಲ್ಲಿಸಿ, ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-7 ಅವರಿಗೆ ವಹಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-

ಪ್ರಃ: 7 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ ಆ-

ಪ್ರ-8 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ ಆ-

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 02-12-2025

ಸಿವಿಲ್ ಹಾಗೂ ಪ್ರ ದ ನ್ಯಾ, ದಂಡಾಧಿಕಾರಿಗಳು,
ಜೇವರ್ಗಿ.